# (೩) ಗಜಕುಮಾರನ ಕಥೆ

ಗಜಕುಮಾರನ ಕಥೆಯಂ ಪೇೞ್ವೆಂ:

ಗಾಹೆ || ಭೂಮೀಏ ಸಮಂ ಖೀಲಾಭಾಇದ ದೇಹೋವಿ ಅಲ್ಲಚಮ್ಮಂ ವ|
ಭಗವಂ ಪಿ ಗಜಕುಮಾರೋ ಪಡಿವಣ್ಣೋ ಉತ್ತಮಂ ಅಟ್ಠಂ||

[[1]ಭೂಮೀ ಏ ಸಮಂ—ನೆಲದೊಳೊಂರಂತಾಗೆ ಮಲರ್ೞ್ಚಿಯುರದಿಂ ತಗುಳ್ದು ನಾಭಿವರೆಗಂ ಬಸಿಱಂ ಪೋೞ್ದು ಅಲ್ಲಚಮ್ಮಂ—ಪಂದೊವಲಂ ತೆಗೆದು, ಖೀಲಾಭಾ ಇದದೆಹೋವಿ[1]—ಕಾಯ್ದು ಕರ್ಬೊನ್ನ ನಿಡಿಯವುಂ ತೋರಮುಮಪ್ಪ ಕೀಲ್ಗಳಿಂದಂ ಮೆಯ್ಯೆಲ್ಲಮಂ ನಿರಂತರಮುರ್ಚಿ ಪೋಗಿ ನೆಲಸಂ [2]ತಾಪಿಸಂ ಕೀ[2]ಲಿಱಿಯೆಪಟ್ಟ ಮೆಯ್ಯನೊಡೆಯನಾಗಿಯುಂ, ಭಗವಂ—ಪರಿದಪ್ಪ ಪೆರ್ಮೆಯನೊಡೆಯಂ ಗಜ ಕುಮಾರೋಪಿ—ಗಜಕುಮಾರನುಂ, ಪಡಿವಣ್ಣೋ—ಪೊ[3]ರ್ದಿ[3]ದೊಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನಜ್ಞಾನಚಾರಿತ್ರಂಗಳಾರಾಧನೆಯುಂ]

ಅದೆಂತೆದೊಡೆ:

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಸುರ[4]ಟ[4]ಮೆಂಬುದು ನಾಡಲ್ಲಿ ದ್ವಾರಾವತಿಯೆಂಬುದು ಪೊಲಲದನಾಳ್ವೊಂ [5]ವಿಷ್ಣು ಅರ್ಧಚಕ್ರಿ[5]ಯಾತನ ತಂದೆ ವಸುದೇವ ಸ್ವಾಮಿಯೆಂಬೊನಾ [6]ವಸುದೇವಸ್ವಾಮಿಯ[6]ರಸಿ ಗಾಂಧರ್ವದತ್ತೆಯೆಂಬೊಳಾಯಿರ್ವರ್ಗಂ ಗಜಕುಮಾರನೆಂಬೊಂ ಮಗ[7] ನಪ್ಪೊನಂತವರ್ಗಳಿಷ್ಟ ವಿಷಯಕಾಮ ಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತಿತ್ತ ಸೂರದತ್ತಮೆಂಬುದು ನಾಡಲ್ಲಿ ಪೌದನಪುರಮೆಂಬುದು ಪೊೞಲದನಾಳ್ವೊನಪರಾಜಿತನೆಂಬೊನರಸ[7]ನಾದಮಾನುಂ ಪ್ರಚಂಡ ಬಳಗರ್ವಿತನಾರುಮನುಱದೊಂ ವಿಷ್ಣು[8]ಗಂ ಬೆಸ[8]ಕೆಯ್ಯನೊಂದು ದಿವಸಂ ವಿಷ್ಣು ಪೊೞಲೊಳ್ [9]ಗೋಸಣಿ[9]ಯಂ ತೊಟ[10]ಲ್ಚಿದನಾ[10] ವನೊರ್ವಂ ಪೌದನಪುರಾಧಿಪತಿಯಪ್ಪಪರಾಜಿತನಂ ಸಂಗ್ರಾಮದೊಳ್ ಕಾದಿ ಗೆಲ್ದು ಪಿ[11]ಡಿ[11]ಕೊಂಡು ಬರ್ಕುಮಾತಂಗೆಯಾತನ ಬೇಡುವುದೆಲ್ಲಮಂ ಕುಡುವೆನೆಂದು ತೊೞಲ್ವ ಗೋಸಣೆಯಂ ಗಜಕುಮಾರಂ ಪಿಡಿದೊಡಾ ಮಾತನರಸಂ ಕೇಳ್ದು ಗಜಕುಮಾರನಂ ಕರೆಯಿಸಿಯಾತನೊಡನೆ ಚಾತುರ್ದಂತ ಬಳಮಂ ಕೂಡಿಯಟ್ಟಿದೊಡಾತನುಂ ಪೋಗಿಯಪರಾಜಿತನೊಡನೆ ಮಹಾಯುದ್ಧಂಗೆಯ್ದು ಗೆಲ್ದು ಪೆಡಂಗೆಯ್ಯುಡಿಯೆ ಕಟ್ಟಿ ಗಜತುರಗವಸ್ತುವಾಹನ ಸಹಿತಂ ತಂದು ವಿಷ್ಣುಗೊಪ್ಪಿಸಿದೊಡಾತನುಮೊಸೆದು ನೀನ್ ಮೆಚ್ಚಿದುದಂ ಬೇಡಿ

---

1. ಭೂಮೀಏ-ಸಮನೆಲ ತವರು, ಅಲ್ಲಚದ್ಮುಮಂ ಪಪಓ-ಒರ್ವನ ತೋಳಂ ತೆಗೆದು, ನಿರಖಾಇರದೇ ಹೋಪಿ (ಘಚಛ). 2. ತಾಂಗ (ಘಛ). 3. ಳ್ದಿ (ಕಖಗ). 4. ಥ (ಘಚಛ). 5. ವಿಷ್ಣು ಅರ್ಧಚಕ್ರವರ್ತಿ (ಗ). ವಿಷ್ಣುವರ್ಧನ ಚಕ್ರವರ್ತಿ (ಘಛ). ಅರ್ಧಚಕ್ರವರ್ತಿಯಪ್ಪ ವಿಷ್ಣುವೆಂಬನಾ (ಚ) 6. ತನ್ನ (ಘಚಛ). 7. (ಕಖಗ)ಗಳಲ್ಲಿ ಇಲ್ಲ. 8. ಗಮಿಂಬು (ಘಚಛ). 9. ಘೋಷಣೆ (ಕಖಘ). 10. ಚ್ಚಿಯಾ (ಕಖಗ). 11. ಡಿದು ಕಟ್ಟಿ (ಘಛ),

ಕೊಳ್ಳೆನೆ ಪೆಱತೇನುಮನೊಲ್ಲೆನ್ ನಿಮ್ಮ ಪ್ರಸಾದದಿಂದೆನಗೆಲ್ಲಮುಂಟು ಒಂದು ಬೇಟ್ಪೆಂ ನಿಮ್ಮಂತಃಪುರಮುಟಿಯೆ ಪೊಟಲೊಳಗೆನ್ನ ಮೆಚ್ಚಿದ ಪಂಡಿರನೆ ಕೊಂಡೆನ್ನಿಚ್ಚೆಯೊಳ್ ಮೆಚ್ಚಿದಂತೆ ಬಾಟ್ಪೆನೀ ದಾಯಮಂಬೇಡಿರ್ದೆನಿದನೆನಗೆ ದಯೆಗೆಯ್ದು ಸಲಿಸುವುದೆಂದೊಡರಸನುಮಂತೆಗೆಯ್ವೆಂದು ಗಜಕುಮಾರಂಗೆ ಬೇಡಿದುದಂ ಕೊಟ್ಟಂ

ಗಜಕುಮಾರನುಂ ತನ್ನ ಬೇಡಿ[1]ದ ವರಮಂ[1] ಪೆತ್ತು ಪರದರ ಪಾರ್ವರೊಕ್ಕಲಿಗರ ಸಾಮಂತರ ಪೊಟಲೊಳಗುಳ್ಳ ಒಳ್ಳೆಂಡಿರೆಲ್ಲರಂ ಕಣ್ಗಂ ಮನಕ್ಕಂ ಮೆಚ್ಚಿದವರೊಳ್ ತನ್ನಿಚ್ಚೆಯಿ[2]ದಂ ಮೊಱೆದು[2] ಮೊಟ್ಟೆಯಿಸಿ[3]ಯುಯ್ದು[3]ಬಾಟುತ್ತಿರೆ ಮತ್ತಮಾ ಪೊಟಲೊಳ್ ಪಂ[4]ಗುಳ[4]ನೆಂಬ ಸುವರ್ಣ[5]ಗಾಱ[5]ನ ಪೆಂಡತಿ ವಸುಂಧರಿಯೆಂಬೊಳತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವ ವಿಲಾಸ ವಿಭ್ರಮಂಗಳನೊಡೆಯೊಳಂ ಕಂಡು ಗಜಕುಮಾನರನಾಕೆಗಾಟಿಸಿ ತನ್ನ ಮನೆಯೊಳಿಟ್ಟಾಕೆಗಾಸಕ್ತನಾಗಿ ಬಾಟುತ್ತಿರ್ಪಮಾ ಪಿರಣಿಗನುಂ ಪೆಂಡತಿಯ ವಿಯೋಗದೊಳ್ ಸಂತಾಪದಿಂದಮಿರುಳುಂ ಪಗಲುಮನವರತಂ ಬೇ[6][ಯು][6]ತ್ತಮಸಮರ್ಥನಪ್ಪುದಱಿಂದಂ ಮನದೊಳ್ ಗಜ ಕುಮಾರಂಗೆ ಮುಳಿಯುತ್ತಿರ್ಪಂ

ಇಂತು ಪಲಕಾಲಂ ಸಲೆ ಮತ್ತೊಂದು ದಿವಸಮರಿಷ್ಟನೇಮಿ ಭಟ್ಟಾರರ ಸಮವಸರಣಂ ವಿಹಾರಿಸುತ್ತಂ ದ್ವಾರಾವತಿಗೆ ವಂದೊಡೆ ವಿಷ್ಣುವಿನೊಡನೆ ಗಜಕುಮಾರಂ ತ್ರಿಭುವನ ಪರಮೇಶ್ವರನಲ್ಲಿಗೆ ವೋಗಿ ವಂದಿಸಿ ಪೂಜಿಸಿರ್ದು ಭಟಾರರ್ ಧರ್ಮಮಂ ಪೇಟ್ವಲ್ಲಿಯಗಮ್ಯಾಗಮನಂಗೆಯ್ವೊಡಂ ಪೆಱರ ಸಜ್ಜನಂಗಳೊಳ್ ಬ[7]ರ್ದೊಡೆ ಮೆಯ್ವುವ[7] ದುರ್ಗತಿಗಳೊಳಪ್ಪ ದುಃಖಂಗಳಂ ಪೇಟೆ ಕೇಳ್ದು ನಾನ್ಯಥಾಜಿನಭಾಷಿತಮೆಂದು ನಂಬಿ ಭೋಗಂಗಳ್ಗೆ ಪೇಸಿ ವೈರಾಗ್ಯಮಾಗಿ ಎಲ್ಲಮಂ ತೊಱೆದರಿಷ್ಟನೇಮಿ ಭಟ್ಟಾರರ ಪಕ್ಕದೆ ತಪಂಬಟ್ಟುಗ್ರೋಗ್ರ ತಪಶ್ಚರಣಂಗೆಯ್ದು ಪನ್ನೆರಡು ವರ್ಷಂ ಪೋದೊಡೆ [8]ಗ್ರಾಮನಗರಖೇಡಖರ್ವಡ ಮಡಂಬಪಟ್ಟಣ ದ್ರೋಣಾಮುಖಂಗಳಂ[8] ವಿಹಾರಿಸುತ್ತಂ ಮತ್ತಮಾ ದ್ವಾರಾವತಿಗೆ ವಂದು [9]ರೇವತೋ[9]ದ್ಯಾನ ವನದೊಳ್ ರಾತ್ರಿ ಪ್ರತಿಮೆನಿಂದೊನಂ ಸ್ವಜನ ಪರಿಜನ ಬಂಧುವರ್ಗಮುಂ ಶ್ರಾವಕರ್ಕಳುಂ ಬಂದರ್ಚಿಸಿ ಪೊಡೆವಂಟು ಪೋಪರಂ [10]ಪಂಗುಳ[10]ನೆಂಬ ಸುವರ್ಣಕಾರಕಂ ಕಂಡು ಬೆಸಗೊಂಡು ಭಟಾರರೆ ಬರವಂ ಕೇಳ್ದಱಿದು ಪಗೆ[11] ವನ[11]ನಿಱಿಯಲ್ಪೆತ್ತೆನೆಂದು ರಾಗಿಸಿ ಪಲವು ನಿಡಿಯವುಂ ತೋರಮುಮಪ್ಪ ಕಬ್ಬೊನ್ನ ಕೀಲ್ಗಳಂ ಕೊಂಡು ಬಂದು ಕ್ಷಮಾಂಗನಾಲಿಂಗಿತನಪ್ಪ ಮಹಾಮುನಿಯಂ [12]ಮಲರ್ಚೆ[12] ಪಟ್ಟೆರಿಸಿಯುರಃಸ್ಥಲಮಂ ನಾಭಿವರೆಗಂ13ವಿದಾರಿಸಿ ಪಂದೊವಲ್ ಪೊರೆತಾಪಿನೆಗಂ[13]ಸಮ[14]ನ್ತ[14]ವಯವ

1. ದುದಂ (ಝ). 2. ದ ಮೆಳೆದು (ಕಖಗ), ದಂ ಮೆಱೆದು (ಘಝ). 3. (ಘಚಝ)ಗಳಲ್ಲಿಲ್ಲ. 4. ಪಿಂಗಲ (ಘಚ), ಪಿಂಗಳ (ಝ). 5. ಕಾರ (ಘಚ). ಕಾರಕ (ಝ). 6. ವು (ಕಖಗಘಚಜ). ಡು (ಝ). 7. ದುರ್ಗೆಯ್ವ (ಚ). ರ್ದಡುಮೆಯ್ದುವ (ಕಖಗ). 8. (ಘ)ದಲ್ಲಿ ಇಲ್ಲ; ಗ್ರಾಮೇಕರಾತ್ರಂ ನಗರೇ ಪಂಚರಾತ್ರಮಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ನಾನಾ ದೇಶಂಗಳಂ (ಚಝ). 9. ಪ್ರಮದೋ (ಘಚಝ). 10. ಪಿಂಗಲ (ಘಚಝ). 11. ಯ (ಕಖಗ). 12. ಮರಳ್ಚಿ (ಘಝ), ಮರಲ್ಚಿ (ಚ). 13. ಬೆಂದೋಲ್ತೊಲುಗಿದು (ಕಖಗ). ವಿದಾರಿಸಿಬಂದೊಲ್ವರೆತಾಪಿನೆಗಂ (ಘಝ), 14. ಸ್ತ (ಕಖಗ).

ಪ್ರದೇಶಂಗಳೊಳ್ ಕಾಯ್ದು ಕರ್ಬೊನ್ನ ಕೀಲ್ಗಳಂ ನೆಲನಂ ತಾಪಿನಮುರ್ಚಿ ಪೋಗಿ[1]ಱಿ[1]ದೊಡೆ ಕ್ಷಮೆಯಂ ಭಾವಿಸಿ ಧರ್ಮ್ಮಧ್ಯಾನ ಶುಕ್ಲಧ್ಯಾನಂಗಳಂ ಚಾನಿಸಿ ರತ್ನತ್ರಯಮಂ ಸಾಧಿಸಿ ಸಮಾಧಿಮರಣದಿಂ ಮುಡಿಪಿ ದೇವಲೋಕಮೆಂಬ ಪ್ರಾಸಾದಕ್ಕೆ ಕಳಸವಾಗುತ್ತಿರ್ದ್ದ ಸರ್ವಾರ್ಥಸಿದ್ಧಿಯೆಂಬ ಸ್ವರ್ಗದೊಳ್ ಮೂವತ್ತುಮೂಱು ಸಾಗರೋಪಮಾಯುಷ್ಯ ಸ್ಥಿತಿಯನೊಡೆಯನೇಕ ಹಸ್ತಪ್ರಮಾಣನುಂ [2]ಪುಂಡರೀಕ ವರ್ಣಂಗಳನೊಡೆಯೊ[2]ನಹಮಿಂದ್ರ ದೇವನಾಗಿ ಪುಟ್ಟಿದೊಂ

ಮತ್ತಂ ಪೆಱರುಮಾರಾಧಕರಪ್ಪವರ್ಗಳ್ ಗಜಕುಮಾರನ ಮನುಷ್ಯೋಪಸರ್ಗದೊಳಾದ ವೇದನೆಯಂ ಮನದೊಳ್ ಭಾವಿಸುತ್ತಂ ಪಸಿವು ನೀರಟ್ಕೆ ದಾಹವಾತಂ ಸೂಲೆ ಮೊದಲಾಗೊಡೆಯ ವೇದನೆಗಳಂ ಸೈರಿಸಿ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸಮಾಧಿಮರಣದಿಂದಂ ಮುಡಿಪಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

1. ಳಿ (ಛ). 2. (ಕಖಗ)ಗಳಲ್ಲಿಲ್ಲ.